## ಇಲ್ಲಿಯವರೆಗೆ



ತುರ್ತಾಗಿ ಒಬ್ಬ ವ್ಯಕ್ತಿಗೆ ಪಿತ್ತಜನಕಾಂಗ ಕಸಿ ಶಸ್ತ್ರಚಿಕಿತ್ಸೆ ಮಾಡಿಸಬೇಕಾಗಿತ್ತು. ಆಂಬ್ಯುಲೆನ್ಸ್‌ನಲ್ಲಿ ಅದನ್ನು ಸಾಗಿಸಲು ಟ್ರಾಫಿಕ್‌ಮುಕ್ತ ಸಂಚಾರ ವ್ಯವಸ್ಥೆಯನ್ನು ಮಾಡಲಾಗಿತ್ತು. ಹನ್ಸಾ ಓಟಿ ರೂಂಗೆ ಹೋಗಿ ಎಲ್ಲ ವ್ಯವಸ್ಥೆ ಆಗಿರುವುದರ ಪರಿಶೀಲನೆ ಮಾಡುತ್ತಾಳೆ. ಕೆಲವೊಂದು ಹೊಸ ಮಾರ್ಪಾಡು ಮಾಡಲಾಗುತ್ತದೆ. ಡ್ರೈವಿಂಗ್ ಸ್ಕೂಲ್ ಸಂಪೂರ್ಣವಾಗಿ ರೊಬೋಟೀಕರಣ ಮಾಡಿದ್ದನ್ನು ಅಗತ್ಯವಿರುವ ಎಲ್ಲರಿಗೂ ತಿಳಿಸಲಾಗುತ್ತದೆ. ಹೊಸ ಜವಾಬ್ದಾರಿಗಳು ರೊಬೋಗಳ ಮೇಲೆ ಹೊರಿಸಲಾಗುತ್ತದೆ. ಡ್ರೈವಿಂಗ್ ಸ್ಕೂಲ್‌ನಲ್ಲಿ ಅರೆಮಾನವ ಪಡೆಯ ಸದಸ್ಯರಿಗೆ ತರಬೇತಿ ಆಯೋಜಿಸಲಾಗಿದ್ದರೂ ಅವಳಂತೆ ಇತರ ಟ್ರಾಫಿಕ್ ವಾರ್ಡನ್‌ಗಳಿಗೂ ಬೇರೆಡೆ ಅದೇ ರೀತಿ ನಿಯೋಜಿಸಲಾಗುತ್ತದೆ. ಕೆಲಸವನ್ನು ತ್ವರಿತಗೊಳಿಸಿ ಆದಷ್ಟು ಬೇಗ ಈ ಪ್ರಕ್ರಿಯೆ ಪೂರ್ಣಗೊಳಿಸುವುದೇ ವಿಭಾಗದ ಉದ್ದೇಶವಾಗಿರುತ್ತದೆ. ಅರೆಮಾನವ ಪಡೆಯ ಸದಸ್ಯರ ಪಟ್ಟಿ ಅವಳ ಕಂಪ್ಯೂಜೆಕ್ಟರ್‌ನಿಂದ ಬಿಂಬಿತವಾಗಿ ವಿವಿಧ ಹಿನ್ನೆಲೆಯ ದೇಹಸ್ಥಿತಿಯನ್ನು ಬಿಂಬಿಸುತ್ತಿರುತ್ತದೆ. ಒಬ್ಬನಂತೆ ಮತ್ತೊಬ್ಬನಿಲ್ಲ ಎಂಬ ಸ್ಥಿತಿ ನಿರ್ಮಾಣವಾದರೂ ಅವರ ಮನೋಭಾವದಲ್ಲಿನ ಸಮಾನತೆಯೇ ಅವರನ್ನು ಇಲ್ಲಿಗೆ ಕರೆತರಲು ಕಾರಣವಾಗಿತ್ತು. ಅವಿರತ್‌ನಿಗೆ ಪ್ರಕರಣವೊಂದು ತನಿಖೆಗೆ ಬಂದಿದ್ದರಿಂದ ಅದನ್ನು ಮೊದಲು ಪರಿಗಣಿಸಿ ನಂತರ ತಂಡವನ್ನು ತಡವಾಗಿ ಕೂಡಿಕೊಳ್ಳುತ್ತಾನೆ. ಹನ್ಸಾಳನ್ನು ವಾಕಿಯಲ್ಲಿ ಸಂಪರ್ಕಿಸಿ ತನ್ನನ್ನೇ ಅವಳಿದ್ದಲ್ಲಿಗೆ ಟೆಲಿಪೋರ್ಟ್ ಮಾಡಿಸಿ ಎಂದು ಅವಿರತ್ ಹೇಳುತ್ತಾನೆ.

ವಿಚಾರಗಳಿಗೆ ಹೆಚ್ಚು ಪ್ರಭಾವಿತರಾಗಿ ಪೋಲ್‌ನಲ್ಲಿ ಅರೆಮಾನವ ಪಡೆಯ ಸದಸ್ಯರಿಗೆ ಹೆಚ್ಚು ಅಂಕಗಳು ಬೀಳಲು ಕಾರಣವಾಗಿದೆ ಎಂಬುದು ಸ್ಪಷ್ಟವಾಗಿತ್ತು. ಮಾಧ್ಯಮಗಳ ಕ್ರಾಂತಿ ಆಡಳಿತ ವರ್ಗದ ನಿರ್ಧಾರಗಳ ಮೇಲೆ ಬೀರುವ ಪ್ರಭಾವ ನಿರ್ಧಾರದ ನಂತರದ ಕ್ರಿಯೆಯಾಗಿ ತೋರಿದ್ದರೂ ಪಡೆಯ ಸದಸ್ಯರನ್ನು ಕೆಲಸಕ್ಕೆ ನಿಯೋಜಿಸಲು ಇರುವ ವಿಘ್ನಗಳನ್ನು ಬಹಳಷ್ಟು ಮಟ್ಟಿಗೆ ನಿವಾರಿಸಿತ್ತೆಂಬುದು ನಿಜವಾಗಿತ್ತು.

ದಿನಗಳು ಉರುಳಿದಂತೆ ತರಬೇತಿಯ ಅವಧಿಯೂ ಸಹ ಪೂರ್ಣಗೊಂಡು ಜಗತ್ತನ್ನು ಎದುರಿಸಲು ಹೊರಟ ಉತ್ಸಾಹಿ ಯೋಧರಂತೆ ಪಡೆಯ ಸದಸ್ಯರು ಡ್ರೈವಿಂಗ್ ಸ್ಕೂಲ್‌ನಿಂದ ಹೊರಬಂದಿದ್ದರು. ಅವರನ್ನು ಕಚೇರಿಗಳಲ್ಲಿ, ರಸ್ತೆಗಳಲ್ಲಿ ಉಸ್ತುವಾರಿ ಮಾಡುವುದು ತಾವೇ ಆದ್ದರಿಂದ ಅದಕ್ಕೆ ಮುನ್ನ ಬುನಾದಿ ತರಬೇತಿಯಲ್ಲಿ ಕಲಿಸುವ ವಿಚಾರಗಳು ಎಷ್ಟು ಮುಖ್ಯವೆಂಬುದು ವಿದಿತವಾಗಿತ್ತು. ಜೊತೆಗೆ ವರ್ಕ್‌ಶಾಪ್‌ಗೆ ದುರಸ್ತಿಗೆ ನೀಡಲಾದ ರೊಬೋಕಾಪ್‌ಗಳೂ ಸಹಾಯಕ್ಕೆ ಸಜ್ಜಾಗಿ ಹೊರಬಂದಿದ್ದು ಹನ್ಸಾಳಿಗೆ ಆನೆಯ ಬಲ ಬಂದಂತಾಗಿತ್ತು.

ತರಬೇತಿಯ ಅವಧಿಯಲ್ಲಿ ಹನ್ಸಾಳನ್ನು ಹೆಚ್ಚು ಸಂಪರ್ಕಿಸದ ಅವಿರತ್ ಅದರ ಬಳಿಕ ಅವಳನ್ನು ತನ್ನ ಮನೆಗೆ ಆಹ್ವಾನಿಸುವ ಸಂದೇಶವನ್ನು ರವಾನಿಸಿದ್ದ.

‘ಬಹುದೊಡ್ಡ ಕೆಲಸ ಕಾರ್ಯಗತವಾದ ಬಳಿಕ ವೈಯಕ್ತಿಕ ವಿಚಾರಗಳ ಕಡೆಯೂ ಗಮನ ಹರಿಸುವ ಕಾಲ ಸನ್ನಿಹಿತವಾಗಿದೆ ಹನ್ಸ್. ಈ ಸಂಜೆ ನಿನಗಾಗಿ ಮೀಸಲಿಟ್ಟಿದ್ದೇನೆ...’ ಎಂದ ಅವನ ಮಾತುಗಳಲ್ಲಿ ತನ್ನ ಮನದಿಂಗಿತದ ಹೊಳಹಿತ್ತು.

ಹನ್ಸಾ ತನ್ನ ರೊಬೋ ಮಾಮ್ ಅಲಕಾದೇವಿಯನ್ನು ಅಪ್ಪಿಕೊಂಡು ತನ್ನ ಖುಷಿಯನ್ನು ವ್ಯಕ್ತಪಡಿಸಿದ್ದಳು. ಅವಳಿಗೆ ತನ್ನ ಜೀವಿತಾವಧಿಯ ಏರಿಳಿತಗಳು ಪದರಪದರವಾಗಿ ಕಣ್ಮುಂದೆ ಸುಳಿದಿತ್ತು. ತನ್ನ ಬಾಲ್ಯದ ಚಿಕ್ಕಂದಿನ ದಿನಗಳಲ್ಲಿ ತನ್ನ ತಂದೆ ಗಡಿಯ ಕೆಲಸದಿಂದ ಕೆಲ ದಿನಗಳ ಕಾಲ ರಜೆಗೆ ಮನೆಗೆ ಬಂದಾಗ ಅವರೊಂದಿಗೆ ವಿವಿಧ ಪ್ರವಾಸಿ ತಾಣಗಳಿಗೆ ಸುತ್ತಾಡುತ್ತಿದ್ದುದು... ಶಾಲೆಗೆ ಹೋಗುವಾಗ ತನ್ನ ತಾಯಿ ನೀಡುತ್ತಿದ್ದ ಅಕ್ಕರೆಯ ತಿಂಡಿ ಡಬ್ಬಿ... ತನ್ನ ಗೆಳೆಯ ಗೆಳತಿಯರ ಗುಂಪಿನೊಂದಿಗೆ ಕ್ರಾಸ್ ಕಂಟ್ರಿ ರೈಡ್‌ಗೆ ಹೊರಟಿದ್ದು...

ಅವಿರತ್‌ನೊಂದಿಗಿನ ಒಡನಾಟ ಗಟ್ಟಿಗೊಳ್ಳುವ ಹಂತದಲ್ಲಿ ಈ ಯೋಚನೆಗಳು ಸುಳಿದು ಅವಳಲ್ಲಿನ ಭಾವುಕ ಹೃದಯವನ್ನು ಬಡಿದೆಬ್ಬಿಸಿದಂತಾಗಿತ್ತು. ಅವನು ನೀಡಿದ ಹೊರವಲಯದ ಲೊಕೇಷನ್ ಕಡೆ ತನ್ನ ವಾಹನವನ್ನು ಓಡಿಸುವಾಗ ಅವಿರತ್‌ನ ಮನೆಯಲ್ಲಿ ಅವನು ಮಾಹಿತಿ ನೀಡಿರುವ ಪ್ರಕಾರ ಯಾರ್‍ಯಾರಿರಬಹುದೆಂದು ಅಂದಾಜು ಮಾಡಿದಳು.

ಅವನ ತಾಯಿ ತನ್ನ ಬರುವಿಕೆಗಾಗಿ ಕಾಯುತ್ತಿರಬಹುದು. ಅವನು ಹೇಳಿರುವಂತೆ ಪ್ರಮುಖ ನಿರ್ಧಾರಗಳನ್ನು ಅವನ ತಾಯಿಗೆ ತೆಗೆದುಕೊಳ್ಳಲು ಬಿಟ್ಟಿರಬೇಕು... ತಂಗಿಯೊಬ್ಬಳು ಮನೆಯಲ್ಲಿ ಇರಬೇಕು... ಅವನ ತಂದೆ ನಿವೃತ್ತಿಯ ಬಳಿಕ ಹಿರಿಯ ನಾಗರೀಕರಿಗಿರುವ ಚಾನಲ್‌ಗೆ ಲಾಗ್ ಇನ್ ಆಗಿ ಕಾರ್ಯಕ್ರಮಗಳ ವೀಕ್ಷಣೆ ಮಾಡುತ್ತಿರಬೇಕು...

ಒಂದರ ಹಿಂದೆ ಒಂದು ಸರಣಿಯಂತೆ ಮೂಡುತ್ತಿದ್ದ ಆಲೋಚನೆಗಳಿಗೆ ಲಗಾಮು ಹಾಕುವಂತೆ ಅವಳ ವಾಹನ ನಿರ್ದಿಷ್ಟ ಲೊಕೇಷನ್‌ಗೆ ಆಗಮಿಸಿತ್ತು. ವಾಹನದ ಅನೌನ್ಸರ್ ಸ್ಥಳವನ್ನು ಘೋಷಿಸುತ್ತಿದ್ದಂತೆ ಹನ್ಸಾ ತನ್ನ ಮುಂದಿದ್ದ ಮನೆಯ ಗೇಟ್ ಮುಂದೆ ವಾಹನ ತಂದು ನಿಲ್ಲಿಸಿದಾಗ ವಾಹನವನ್ನು ಗುರುತಿಸಿದ ಗೇಟ್‌ನ ಸೆನ್ಸಾರ್ ಅವಿರತ್‌ನ ಪೂರ್ವ ನಿರ್ದೇಶನದಂತೆ ತನ್ನಂತಾನೇ ಅಡ್ಡಡ್ಡವಾಗಿ ತೆರೆದುಕೊಂಡು ಒಳ ಪ್ರವೇಶಿಸಲು ದಾರಿ ಮಾಡಿಕೊಟ್ಟಿತ್ತು. ಯಾವುದೋ ಚೆಂದದ ಹೂದೋಟದೊಳಗೆ ಆಗಮಿಸಿದಂತೆ ಅನಿಸಿ ಒಂದೆಡೆ ನಿಲುಗಡೆ ಪ್ರದೇಶವೆಂಬ ಸೂಚಕವಿದ್ದೆಡೆ ವಾಹನ ನಿಲ್ಲಿಸಿ ಕೆಳಗಿಳಿದಳು.

ಅವಳ ಬರುವಿಕೆಯನ್ನು ತನ್ನ ಕೋಣೆಯಲ್ಲಿದ್ದುಕೊಂಡೇ ತನ್ನ ಉಪಕರಣಕ್ಕೆ ಅಳವಡಿಸಿದ ಆ್ಯಪ್‌ನಿಂದ ಹೊರಗಿನ ಕ್ಯಾಮೆರಾ ಬಿಂಬಿಸಿದ ದೃಶ್ಯಗಳಿಂದ ಅರಿತುಕೊಂಡು ಅವಿರತ್ ದ್ವಾರದ ಬಳಿ ಅವಳನ್ನು ಸ್ವಾಗತಿಸಲು ಬಂದಿದ್ದ. ಅವನೊಂದಿಗೆ ಅವನ ತಾಯಿ, ತಂಗಿ ಹಾಗೂ ತಂದೆ ಜೊತೆಗೂಡಿರುವರೆಂದು ಎಣಿಸಿದ್ದವಳಿಗೆ ನಿರಾಸೆ ಕಾದಿತ್ತು. ‘ಒಳಗೆ ಬಾ ಹನ್ಸ್. ನಿನ್ನನ್ನು ಭೇಟಿಯಾದ ಪ್ರಾರಂಭದಲ್ಲಿಯೇ ಮನೆಗೆ